# ಯಟ್ಟಾ ಯಟ್ಟಾ ಹಿಟ್!

ಚಿತ್ರ ವಿಚಿತ್ರ ಸಾಹಿತ್ಯದ ಹಾಡುಗಳು ಈಗೀಗ ಚಂದನವನದಲ್ಲಿ ಒಂದು ಟ್ರೆಂಡ್ ಆಗಿಯೇ ಬೆಳೆದಿದೆ. ಅಂಥದ್ದೇ ಒಂದು ಹಾಡನ್ನು ಇತ್ತೀಚೆಗೆ ಮಹೇಶ್ ಗೌಡ ನಿರ್ದೇಶನದ 'ತ್ರಿಬಲ್ ರೈಡಿಂಗ್' ಸಿನಿಮಾತಂಡ ಬಿಡುಗಡೆ ಮಾಡಿದೆ. 'ಯಟ್ಟಾ ಯಟ್ಟಾ' ಎಂದು ಶುರುವಾಗುವ ಈ ಹಾಡು ಸೋಷಿಯಲ್ ಮೀಡಿಯಾಗಳಲ್ಲಿಯೂ ಸಾಕಷ್ಟು ಸದ್ದು ಮಾಡುತ್ತಿದೆ. ಚಂದನ್ ಶೆಟ್ಟಿ ಮತ್ತು ಮಂಗ್ಲಿ ಹಾಡಿರುವ ಈ ಹಾಡಿಗೆ ಸಂಗೀತ ಹೊಸೆದಿರುವುದು ಸಾಯಿ ಕಾರ್ತಿಕ್. ಗಣೇಶ್, ಅದಿತಿ ಪ್ರಭುದೇವ, ಮೇಘಾ ಶೆಟ್ಟಿ ಮತ್ತು ರಚನಾ ಇಂದರ್ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ.

ಗಣೇಶ್ ಈ ಚಿತ್ರದಲ್ಲಿ ಡಾಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಲವ್ ಮಾಕ್ಟೇಲ್' ಸಿನಿಮಾದ ಮೂಲಕ ಪರಿಚಿತರಾದ ರಚನಾ ಇಂದರ್ ಈ ಚಿತ್ರದಲ್ಲಿ ವಿಶಿಷ್ಟವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ.

'ಲವ್ ಮಾಕ್ಟೇಲ್' ನಂತರ ನಾನು ಒಪ್ಪಿಕೊಂಡ ಸಿನಿಮಾ ಇದು. ಇದರಲ್ಲಿ ಹಟಮಾರಿ ಹೆಣ್ಣಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಏನಾದರೂ ಬೇಕು ಅನಿಸಿದರೆ ಅದನ್ನು ಪಡೆದೇ ತೀರುವ ಛಲದ ಹುಡುಗಿ. ಇದು ಜನರಿಗೂ ಇಷ್ಟವಾಗುತ್ತದೆ ಎಂಬ ನಂಬಿಕೆಯಲ್ಲಿದ್ದೇನೆ' ಎಂದು ಉತ್ಸಾಹದಿಂದ ಹೇಳುತ್ತಾರೆ ರಚನಾ.

ಸದ್ಯದಲ್ಲಿಯೇ ಚಿತ್ರದ ಬಿಡುಗಡೆಯ ದಿನಾಂಕವನ್ನೂ ಘೋಷಿಸುವ ಸಿದ್ಧತೆಯಲ್ಲಿ ಚಿತ್ರತಂಡವಿದೆ. ■



ರಚನಾ ಇಂದರ್

# ದುಬೈ ವಿಮಾನದಲ್ಲಿ ಜಯರಾಜ್!

ಅಂಡರ್‌ವರ್ಲ್ಡ್ ಡಾನ್ ಜಯರಾಜ್ ಜೀವನವನ್ನು ಆಧರಿಸಿದ 'ಹೆಡ್‌ಬುಷ್' ಸಿನಿಮಾ ಸೆಟ್ಟೇರಿದಾಗಿನಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಹೇಳಿಕೇಳಿ ಡಾನ್ ಕಥೆಯಲ್ಲವೇ? ಸದ್ದಿಲ್ಲದಿರಲು ಹೇಗೆ ಸಾಧ್ಯ?

ಧನಂಜಯ್ ನಿರ್ಮಾಣ ಮಾಡಿ, ಜಯರಾಜ್ ಪಾತ್ರದಲ್ಲಿ ನಟಿಸುತ್ತಿರುವ ಈ ಸಿನಿಮಾವನ್ನು ಶೂನ್ಯ ನಿರ್ದೇಶಿಸುತ್ತಿದ್ದಾರೆ. ಚಂದನವನದ ತಮ್ಮ ಸಮಕಾಲೀನ ಮತ್ತು ಹಿರಿಯ ಹಲವು ನಟರನ್ನು ಈ ಚಿತ್ರದಲ್ಲಿ ಒಂದುಗೂಡಿಸುವ ಕೆಲಸವನ್ನು ಧನಂಜಯ್ ಮಾಡುತ್ತಿದ್ದಾರೆ. ಶ್ರುತಿ ಹರಿಹರನ್, ವಸಿಷ್ಠ ಸಿಂಹ, ರಘು ಮುಖರ್ಜಿ, ಲೂಸ್ ಮಾದ, ರವಿಚಂದ್ರನ್ ಹೀಗೆ ಘಟಾನುಘಟಿಗಳ ದಂಡೇ ಇಲ್ಲಿದೆ.

ಜಯರಾಜ್ ಕುರಿತು ಸಿನಿಮಾ ಎಂದಮೇಲೆ ವಿವಾದಗಳಿಲ್ಲದೆ ಮುಗಿಯಲು ಸಾಧ್ಯವೇ? ಜಯರಾಜ್ ಮಗನೇ ಈ ಸಿನಿಮಾ ನಿರ್ಮಾಣಕ್ಕೆ ತಡೆಯೊಡ್ಡುವ ಪ್ರಯತ್ನವನ್ನು ಮಾಡಿದ್ದು, ನಿರ್ಮಾಪಕರ ಸಂಘಕ್ಕೆ ದೂರು ನೀಡಿದ್ದೆಲ್ಲವೂ ಬೆಂಕಿಯಂತೆ ಭುಗಿಲೆದ್ದು ನೀರಿನಂತೆ ತಣ್ಣಗಾಗಿದ್ದೂ ಆಗಿದೆ. ಕನ್ನಡದ ಜೊತೆಗೆ ಬೇರೆ ಭಾಷೆಯಲ್ಲಿಯೂ ಕುತೂಹಲ ಮೂಡಿಸಿರುವ ಈ ಸಿನಿಮಾ, ಈಗ ಬಿಡುಗಡೆಗೆ ಸಜ್ಜಾಗಿದೆ. ಅಕ್ಟೋಬರ್ 21ಕ್ಕೆ 'ಹೆಡ್ ಬುಷ್' ವಿಶ್ವದಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿರುವ ಬೆನ್ನಲ್ಲೇ ಪ್ರಚಾರಕಾರ್ಯಕ್ಕೂ ಚುರುಕು ನೀಡಿದೆ.

ಭಿನ್ನ ರೀತಿಯಲ್ಲಿ ಈ ಸಿನಿಮಾದ ಕುರಿತು ಗಮನಸೆಳೆಯಲು ಚಿತ್ರತಂಡ ಹಲವು ಯೋಜನೆಗಳನ್ನು ಹಾಕಿಕೊಂಡಿದೆಯಂತೆ. ಅದರ ಒಂದು ಭಾಗವಾಗಿ ಧನಂಜಯ್ ದುಬೈಗೆ ಹೋಗಿದ್ದರು. ಅರೆ, ದುಬೈಗೆ ಹೋಗುವುದು ಭಿನ್ನ ರೀತಿಯ ಪ್ರಚಾರವೇ ಎಂದು ಕೇಳಬೇಡಿ. ಹೋಗಿದ್ದು ಸುದ್ದಿಯಲ್ಲ, ಅವರು ಹೋದ ರೀತಿ ಸುದ್ದಿ! ದುಬೈಗೆ ಹೋಗುವಾಗ ಅವರು ಜಯರಾಜ್ ಕಾಸ್ಟ್ಯೂಮ್‌ನಲ್ಲಿಯೇ ಹೊರಟಿದ್ದರು. ಬಿಳಿ ದಿರಿಸು, ಕೈಯಲ್ಲೊಂದು ಚರ್ಮದ ಬ್ಯಾಗು ಎಲ್ಲವೂ ಜಯರಾಜ್ ಅವರನ್ನು ನೆನಪಿಸುವಂತಿತ್ತು. ದುಬೈನಲ್ಲಿ ನಡೆದಿರುವ ರಾಜ್ ಕಪ್‌ಗಾಗಿ ಕ್ರಿಕೆಟ್ ಆಡಲು ಧನಂಜಯ್ ಹೊರಟಿದ್ದು. ಆದರೆ ಈ ಅವಕಾಶವನ್ನೂ ತಮ್ಮ ಚಿತ್ರದ ಪ್ರಚಾರಕ್ಕೆ ಬಳಸಿಕೊಳ್ಳಲು ನಿರ್ಧರಿಸಿದ್ದ ಡಾಲಿ, ಜಯರಾಜ್ ವೇಷ ತೊಟ್ಟು ಫ್ಲೈಟ್ ಹತ್ತಿದ್ದಾರೆ.

ದುಬೈ ವಿಮಾನ ಹಾರಿದಷ್ಟೇ ಎತ್ತರಕ್ಕೆ ಸಿನಿಮಾದ ಗೆಲುಗಿನ ಪತಾಕೆಯನ್ನೂ ಹಾರಿಸುವ ಕನಸನ್ನು ಧನಂಜಯ್ ಕಾಣುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಅವರ ಚಿತ್ರತಂಡವೂ ಹಲವು ಹೊಸ ಬಗೆಯ ಪ್ರಚಾರ ಯೋಜನೆಗಳೊಂದಿಗೆ ಸಿದ್ಧವಾಗಿದೆಯಂತೆ. ಅಂಡರ್‌ವರ್ಲ್ಡ್ ಡಾನ್ ಜಯರಾಜ್ ಬದುಕು ಬೆಳ್ಳಿತೆರೆಯ ಮೇಲೆ ಎಷ್ಟು ಸದ್ದು ಮಾಡುತ್ತದೆ ಎಂಬುದನ್ನು ಕಾದು ನೋಡಬೇಕಷ್ಟೆ. ■

